# ಪತ್ರಿಕಾ ಪ್ರಕಟಣೆ

## ಹಣಕಾಸು ವರ್ಷ**(FY) 2021-22** ರಲ್ಲಿ ಭಾರತದ ಸಾಗರ ಉತ್ಪನ್ನಗಳ ರಫ್ತು**7.76** ಶತಕೋಟಿ ಅಮೆರಿಕನ್ ಡಾಲರ್**ಗೆ(USD) ತಲುಪಿ** ಅತ್ಯುನ್ನತ **ಮಟ್ಟದಲ್ಲಿ** ಹಾರುತ್ತಿದೆ

### ಘನೀಕೃತ ಸೀಗಡಿ ರಫ್ತಿನ ಪ್ರಮುಖ ವಸ್ತು

**ಅಮೇರಿಕಾ(USA) , ಚೀನಾ, ಯುರೋಪಿಯನ್ ಒಕ್ಕೂಟ (EU), ಆಗ್ನೇಯ ಏಷ್ಯಾ, ಜಪಾನ್ ಮತ್ತು ಮಧ್ಯಪ್ರಾಚ್ಯ ಪ್ರಮುಖ ಆಮದುದಾರರು**

**ಕೊಚ್ಚಿ, ಜೂನ್ 29**: ಭಾರತವು 2021-22ರ ಅವಧಿಯಲ್ಲಿ 57,586.48 ಕೋಟಿ (USD 7.76 ಶತಕೋಟಿ) ಮೌಲ್ಯದ 13,69,264 MT ಸಮುದ್ರಾಹಾರವನ್ನು ಅನೇಕ ಅಡೆ ತಡೆಗಳ ನಡುವೆಯೂ ರಫ್ತು ಮಾಡಿರುತ್ತದೆ.

ಘನೀಕೃತ ಸೀಗಡಿ, ಪ್ರಮಾಣ, ಮೌಲ್ಯ ಎರಡರಲ್ಲೂ ಪ್ರಮುಖ ರಫ್ತು ವಸ್ತುವಾಗಿ ಉಳಿದಿದೆ ಮತ್ತುಅಮೇರಿಕಾ( USA) ಮತ್ತು ಚೀನಾ ಭಾರತದ ಸಮುದ್ರಾಹಾರದ ಪ್ರಮುಖ ಆಮದುದಾರರಾಗಿ ಹೊರಹೊಮ್ಮಿವೆ.

FY 2021-22 ರ ಅವಧಿಯಲ್ಲಿ, ರಫ್ತು, ರೂಪಾಯಿಯಲ್ಲಿ 31.71%, USD ನಲ್ಲಿ 30.26% ಏರಿಕೆಯಾದರೆ , ಪ್ರಮಾಣದಲ್ಲಿ 19.12% ರಷ್ಟು ಸುಧಾರಿಸಿದೆ. 2020-21 ರಲ್ಲಿ, ಭಾರತವು 43,720.98 ಕೋಟಿ (USD 5,956.93 ಮಿಲಿಯನ್) ಮೌಲ್ಯದ 11,49,510 MT ಸಮುದ್ರಾಹಾರವನ್ನು ರಫ್ತು ಮಾಡಿದೆ.

ಸಾಗರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರದ (MPEDA) ಅಧ್ಯಕ್ಷರಾದ ಶ್ರೀ ಕೆ. ಎನ್. ರಾಘವನ್ IRS, ಮಾರುಕಟ್ಟೆಗಳಲ್ಲಿನ ಹಲವಾರು ಸವಾಲುಗಳ, ಕೋವಿಡ್ ಸಾಂಕ್ರಾಮಿಕ ರೋಗದ, ಹೊರತಾಗಿಯೂ ಭಾರತವು ತನ್ನ ಪ್ರಮುಖ ರಫ್ತು, US$ 7.76 ಶತಕೋಟಿ ಮೌಲ್ಯದ, 13,69,264 MT ಸಮುದ್ರಾಹಾರವನ್ನು ರಫ್ತು ಮಾಡಿ ಸಾರ್ವಕಾಲಿಕ ದಾಖಲೆ ಮಾಡಲು ಯಶಸ್ವಿಯಾಗಿದೆ ಮತ್ತು ಭಾರತ ಸರ್ಕಾರದ ವಾಣಿಜ್ಯ ಇಲಾಖೆ ನೀಡಿದ ರಫ್ತು ಗುರಿಗಳನ್ನು 99.4% ರಷ್ಟು ಪೂರೈಸಲಾಗಿದೆ ಎಂದು ಹೇಳಿದರು

ಘನೀಕೃತ ಸೀಗಡಿ, 42,706.04 ಕೋಟಿ (USD 5,828.59 ಮಿಲಿಯನ್) ರಫ್ತಾಗಿ, ಸಮುದ್ರಾಹಾರ ರಫ್ತಿನ ಬುಟ್ಟಿಯಲ್ಲಿ ತನ್ನ ಮೊದಲ ಸ್ಥಾನವನ್ನು ಉಳಿಸಿಕೊಂಡಿದೆ. ಪ್ರಮಾಣದಲ್ಲಿ 53.18 ಶೇಕಡಾ ಮತ್ತು ಒಟ್ಟು ಡಾಲರ್ ಗಳಿಕೆಯ 75.11 ರಷ್ಟು ಪಾಲನ್ನು ಹೊಂದಿದೆ. ಈ ಅವಧಿಯಲ್ಲಿ ಸೀಗಡಿ ರಫ್ತು USD ಮೌಲ್ಯದಲ್ಲಿ 31.68 ಶೇಕಡಾ ಮತ್ತು ಪ್ರಮಾಣದಲ್ಲಿ 23.35 ಶೇಕಡಾ ಹೆಚ್ಚಾಗಿದೆ.

2021-22 ರ ಅವಧಿಯಲ್ಲಿ ಘನೀಕೃತ ಸೀಗಡಿಗಳ ಒಟ್ಟಾರೆ ರಫ್ತು 7,28,123 MT ಇದ್ದು ಅದು USD 5,828.59 ಮಿಲಿಯನ್ ಮೌಲ್ಯದ ವಿದೇಶಿ ವಿನಿಮಯವನ್ನು ಗಳಿಸಿತು. USA, ಸೀಗಡಿಗೆ ಅತಿ ದೊಡ್ಡ ಮಾರುಕಟ್ಟೆಯಾಗಿದ್ದು, 3,42,572 MT ಘನೀಕೃತ ಸೀಗಡಿಗಳನ್ನು ಆಮದು ಮಾಡಿಕೊಳ್ಳುತ್ತದೆ, ನಂತರ ಚೀನಾ (1,25,667 MT), ಯುರೋಪಿಯನ್ ಯೂನಿಯನ್ (90,549 MT), ಆಗ್ನೇಯ ಏಷ್ಯಾ (44,683 MT), ಜಪಾನ್ (38,492 MT), ಮತ್ತು ಮಧ್ಯಪ್ರಾಚ್ಯ (37,158 MT). ಘನೀಕೃತ ಸೀಗಡಿಗಳ ರಫ್ತು ಮೌಲ್ಯ, ಎಲ್ಲಾ ಮಾರುಕಟ್ಟೆಗಳಲ್ಲಿ ಹೆಚ್ಚಳವನ್ನು ತೋರಿಸಿದೆ.

ವನ್ನಾಮಿ (ಬಿಳಿ ಕಾಲು) ಸೀಗಡಿಯ ರಫ್ತು 2021-22 ರಲ್ಲಿ 5,15,907 MT ನಿಂದ 6,43,037 MT ಗೆ ಏರಿಕೆಯಾಗಿದೆ. USD ಮೌಲ್ಯದಲ್ಲಿ ಒಟ್ಟು ವನ್ನಾಮಿ ಸೀಗಡಿ ರಫ್ತುಗಳಲ್ಲಿ, USA 59.05% ರಷ್ಟನ್ನು ಹೊಂದಿದೆ, ನಂತರ ಚೀನಾ (14.59 %), ಯುರೋಪಿಯನ್ ಯೂನಿಯನ್ (8.16 %), ಆಗ್ನೇಯ ಏಷ್ಯಾ (4.78 %), ಜಪಾನ್ (3.61 %), ಮತ್ತು ಮಧ್ಯಪ್ರಾಚ್ಯ (3.17 %). USD ಮೌಲ್ಯದಲ್ಲಿ 25.90% ರಷ್ಟು ಪಾಲನ್ನು ಹೊಂದಿರುವ USA, ಕಪ್ಪು ಟೈಗರ್ ಸೀಗಡಿಗೆ ಪ್ರಮುಖ ಮಾರುಕಟ್ಟೆಯಾಗಿ ಹೊರಹೊಮ್ಮಿದರೆ, ನಂತರದ ಸ್ಥಾನ ಯುರೋಪಿಯನ್ ಯೂನಿಯನ್ (23.78%) ಮತ್ತು ಜಪಾನ್ (22.71%)ಗೆ ಲಭಿಸಿವೆ.

ಇತರ ವಸ್ತುಗಳು, ಎರಡನೇ ಅತಿ ದೊಡ್ಡ ರಫ್ತು ಐಟಂ ಆಗಿ ಹೊರ ಹೊಮ್ಮಿ, ರೂ 3,979.99 ಕೋಟಿ (USD 540.73 ಮಿಲಿಯನ್) ಗಳಿಸಿತು, ಪ್ರಮಾಣದಲ್ಲಿ 12.96% ಮತ್ತು ಡಾಲರ್ ಗಳಿಕೆಯಲ್ಲಿ 6.97 % ನಷ್ಟಿದೆ. ಇತರ ವಸ್ತುಗಳ ರಫ್ತು ರೂಪಾಯಿ ಮೌಲ್ಯದಲ್ಲಿ 43.8 % ಮತ್ತು ಡಾಲರ್ ಮೌಲ್ಯದಲ್ಲಿ 42.94 % ರಷ್ಟು ಹೆಚ್ಚಾಗಿದೆ. ಇತರ ವಸ್ತುಗಳು USD ಪರಿಭಾಷೆಯಲ್ಲಿ 56.55% ರಷ್ಟು ಇದ್ದು, ಸುರಿಮಿ ಮತ್ತು ಸುರಿಮಿ ಅನಲಾಗ್ ಉತ್ಪನ್ನಗಳನ್ನು ಒಳಗೊಂಡಿರುತ್ತವೆ.

ಮೂರನೇ ಅತಿ ದೊಡ್ಡ ರಫ್ತು ವಸ್ತುವಾದ ಘನೀಕೃತ ಮೀನುಗಳು 3471.91 ಕೋಟಿ ರೂ (USD 471.45 ಮಿಲಿಯನ್) ಗಳಿಸಿದ್ದು, ಪ್ರಮಾಣದಲ್ಲಿ 16.55 ಶೇಕಡಾ ಮತ್ತು ಡಾಲರ್ ಗಳಿಕೆಯಲ್ಲಿ ಶೇಕಡಾ 6.08 ರಷ್ಟಿದೆ. ಘನೀಕೃತ ಮೀನಿನ ರಫ್ತು, ಪ್ರಮಾಣದಲ್ಲಿ 20.44% ಮತ್ತು ಡಾಲರ್ ಮೌಲ್ಯದಲ್ಲಿ 17.19% ಹೆಚ್ಚಾಗಿದೆ.

ಘನೀಕೃತ ಸ್ಕ್ವಿಡ್ ರಫ್ತು, 75,750 MT ಇದ್ದು, ಪ್ರಮಾಣದಲ್ಲಿ 23.82% ಮತ್ತು ಡಾಲರ್ ಲೆಕ್ಕದಲ್ಲಿ 40.24% ಬೆಳವಣಿಗೆಯನ್ನು ತೋರಿಸಿದೆ ಮತ್ತು ರೂ 2,806.09 ಕೋಟಿ (383.37 USD ಮಿಲಿಯನ್) ಗಳಿಸಿದೆ.

ಘನೀಕೃತ ಕಟ್ಲ್‌ಫಿಶ್‌ನ ರಫ್ತು, 58,992 MT ಗಳಷ್ಟಿದ್ದು, ರೂಪಾಯಿ ಮೌಲ್ಯದಲ್ಲಿ 26.83 % ಮತ್ತು USD ಮೌಲ್ಯದಲ್ಲಿ 26.18 % ಬೆಳವಣಿಗೆಯನ್ನು ತೋರಿಸಿದೆ ಮತ್ತು Rs 2062.63 ಕೋಟಿ (280.08 USD ಮಿಲಿಯನ್) ಗಳಿಸಿದೆ.

ಒಣಗಿದ ವಸ್ತುಗಳ ರಫ್ತು, 73,679 MT ಎಂದು ನಿಗದಿಪಡಿಸಲಾಗಿದೆ, ರೂಪಾಯಿ ಮೌಲ್ಯದಲ್ಲಿ 28.27 % ನಷ್ಟು ಬೆಳವಣಿಗೆಯನ್ನು ತೋರಿಸಿದೆ ಆದರೆ USD ಮೌಲ್ಯದಲ್ಲಿ 8.59 % ಇಳಿಕೆಯಾಗಿದೆ ಮತ್ತು ರೂ 1472.98 ಕೋಟಿ (143.46 USD ಮಿಲಿಯನ್) ಗಳಿಸಿದೆ.

ಭರವಸೆಯ ವಲಯವೆಂದು ಪರಿಗಣಿಸಲ್ಪಟ್ಟಿರುವ ಶೀತಲ ವಸ್ತುಗಳ ರಫ್ತು ಪ್ರಮಾಣ ಪರಿಭಾಷೆಯಲ್ಲಿ 23.08 % ಮತ್ತು ರೂಪಾಯಿಯ ಪರಿಭಾಷೆಯಲ್ಲಿ 53.45 % ರಷ್ಟು ಹೆಚ್ಚಾಗಿದೆ ಆದರೆ USD ಪರಿಭಾಷೆಯಲ್ಲಿ 1.87 ರಷ್ಟು ಕುಸಿದಿದೆ.

ಲೈವ್ (ಜೀವಂತ) ಐಟಂಗಳ ರಫ್ತು, 7,032 MT ಇದ್ದು, ಪ್ರಮಾಣದಲ್ಲಿ 60.57%, ರೂಪಾಯಿ ಮೌಲ್ಯದಲ್ಲಿ 47.43% ಮತ್ತು USD ಪರಿಭಾಷೆಯಲ್ಲಿ 46.67% ಬೆಳವಣಿಗೆಯನ್ನು ತೋರಿಸಿದೆ.

ಘನೀಕೃತ ಸೀಗಡಿ, ಘನೀಕೃತ ಕಟ್ಲ್‌ಫಿಶ್, ಘನೀಕೃತ ಸ್ಕ್ವಿಡ್, ಒಣಗಿದ ವಸ್ತುಗಳು ಮತ್ತು ಇತರ ವಸ್ತುಗಳ ಘಟಕ ಮೌಲ್ಯದ ಸಾಕ್ಷಾತ್ಕಾರವು ಧನಾತ್ಮಕ ಬೆಳವಣಿಗೆಯನ್ನು ತೋರಿಸಿದೆ.

ಸಾಗರೋತ್ತರ ಮಾರುಕಟ್ಟೆಗಳಿಗೆ ಸಂಬಂಧಿಸಿದಂತೆ, ಅಮೇರಿಕಾ ದೇಶ ಮೌಲ್ಯ ಮತ್ತು ಪರಿಮಾಣದಲ್ಲಿ USD 3371.66 ಮಿಲಿಯನ್ ಮೌಲ್ಯದ ಆಮದುಗಳೊಂದಿಗೆ ಭಾರತೀಯ ಸಮುದ್ರಾಹಾರದ ಪ್ರಮುಖ ಆಮದುದಾರನಾಗಿ ಮುಂದುವರೆಯಿತು ಮತ್ತು ಡಾಲರ್ ಮೌಲ್ಯದ ಪರಿಭಾಷೆಯಲ್ಲಿ 37.56 % ಪಾಲನ್ನು ಹೊಂದಿದೆ. ಈ ದೇಶದ ರಫ್ತು

ಪ್ರಮಾಣದಲ್ಲಿ 27.63 %, ರೂಪಾಯಿ ಮೌಲ್ಯದಲ್ಲಿ 36.76 % ಮತ್ತು USD ಗಳಿಕೆಯಲ್ಲಿ 37.56 % ಬೆಳವಣಿಗೆಯನ್ನು ದಾಖಲಿಸಿದೆ. ಘನೀಕೃತ ಸೀಗಡಿಯು ಅಮೇರಿಕಾಕ್ಕೆ ರಫ್ತಾಗುವ ಪ್ರಮುಖ ವಸ್ತುವಾಗಿ ಮುಂದುವರೆಯಿತು ಮತ್ತು ಈ ದೇಶಕ್ಕೆ ರಫ್ತಾಗುವ ವನ್ನಾಮಿ ಸೀಗಡಿ ಪ್ರಮಾಣದಲ್ಲಿ 26.81% ಮತ್ತು ಡಾಲರ್ ಲೆಕ್ಕದಲ್ಲಿ 34.65% ಬೆಳವಣಿಗೆಯನ್ನು ತೋರಿಸಿದೆ. ಕಪ್ಪು ಹುಲಿ ಸೀಗಡಿಯ ರಫ್ತು ಪ್ರಮಾಣ ಪರಿಭಾಷೆಯಲ್ಲಿ 68.99% ಮತ್ತು USD ಪರಿಭಾಷೆಯಲ್ಲಿ 152.06% ಹೆಚ್ಚಾಗಿದೆ.

USD 1,175.05 ಮಿಲಿಯನ್ ಮೌಲ್ಯದ 2,66,989 MT ಆಮದು ಮಾಡಿಕೊಳ್ಳುವುದರೊಂದಿಗೆ, ಪ್ರಮಾಣದಲ್ಲಿ 19.50% ಮತ್ತು ಡಾಲರ್ ಲೆಕ್ಕದಲ್ಲಿ 15.14% ರಷ್ಟನ್ನು ಹೊಂದಿರುವ ಚೀನಾವು ಭಾರತದಿಂದ ಎರಡನೇ ಅತಿದೊಡ್ಡ ಸಮುದ್ರಾಹಾರ ರಫ್ತು ತಾಣವಾಗಿ ಹೊರಹೊಮ್ಮಿದೆ. ಚೀನಾ ಮಾರುಕಟ್ಟೆಗೆ ರಫ್ತು ಪ್ರಮಾಣದಲ್ಲಿ 22.28% ಮತ್ತು ರೂಪಾಯಿ ಮೌಲ್ಯದಲ್ಲಿ 31.09% ಮತ್ತು 25.12% USD ಮೌಲ್ಯದಲ್ಲಿ ಬೆಳೆದಿದೆ. ಚೀನಾಕ್ಕೆ ರಫ್ತು ಮಾಡುವ ಪ್ರಮುಖ ವಸ್ತುವಾದ ಘನೀಕೃತ ಸೀಗಡಿ, ಪ್ರಮಾಣದಲ್ಲಿ 47.07% ಮತ್ತು ಡಾಲರ್ ಮೌಲ್ಯದಲ್ಲಿ 67.04% ಪಾಲನ್ನು ಹೊಂದಿದ್ದು, ಘನೀಕೃತ ಮೀನುಗಳು ಪ್ರಮಾಣದಲ್ಲಿ 32.10% ಮತ್ತು ಒಟ್ಟು ಮೌಲ್ಯದ ಪ್ರಕಾರ 15.19% ನಷ್ಟು ಪಾಲನ್ನು ಹೊಂದಿವೆ. ಚೀನಾಕ್ಕೆ ರಫ್ತಾಗುವ ಘನೀಕೃತ ಸೀಗಡಿ, ಪ್ರಮಾಣ ಮತ್ತು ಪರಿಮಾಣಗಳೆರಡಲ್ಲೂ ಧನಾತ್ಮಕ ಬೆಳವಣಿಗೆಯನ್ನು ತೋರಿಸಿದೆ

ಐರೋಪ್ಯ ಒಕ್ಕೂಟವು ರಫ್ತಿನ ಪ್ರಮುಖ ವಸ್ತುವಾದ ಘನೀಕೃತ ಸೀಗಡಿಗಳೊಂದಿಗೆ ಭಾರತೀಯ ಸಮುದ್ರಾಹಾರಕ್ಕಾಗಿ ಮೂರನೇ ಅತಿದೊಡ್ಡ ತಾಣವಾಗಿ ಮುಂದುವರೆದು, ಪ್ರಮಾಣ ಮತ್ತು ಡಾಲರ್ ಮೌಲ್ಯದಲ್ಲಿ ಕ್ರಮವಾಗಿ 29.11% ಮತ್ತು 37.09% ಹೆಚ್ಚಳವನ್ನು ದಾಖಲಿಸಿದೆ.

ಆಗ್ನೇಯ ಏಷ್ಯಾ ನಾಲ್ಕನೇ ಅತಿದೊಡ್ಡ ಮಾರುಕಟ್ಟೆಯಾಗಿದೆ. ಘನೀಕೃತ ಸೀಗಡಿ, ರಫ್ತಿನ ಪ್ರಮುಖ ವಸ್ತುವಾಗಿ,ಪ್ರಮಾಣದಿಂದ 18.36% ಮತ್ತು 36.81% USD ಮೌಲ್ಯದೊಂದಿಗೆ 22.29% ಬೆಳವಣಿಗೆ ಸಾಧಿಸಿದೆ. ಘನೀಕೃತ ಮೀನು, ರಫ್ತಿನ ಎರಡನೇ ಪ್ರಮುಖ ವಸ್ತುವಾಗಿದೆ. ಇದು ಪ್ರಮಾಣದಿಂದ 33.42% ಮತ್ತು USD ಮೌಲ್ಯದಿಂದ 21.42% ರಷ್ಟು ಇದ್ದು, 82.24% ಬೆಳವಣಿಗೆ ಸಾಧಿಸಿದೆ.

USD ಮೌಲ್ಯದಲ್ಲಿ 5.68% ಮತ್ತು ಪ್ರಮಾಣದಲ್ಲಿ 6.60% ನಷ್ಟು ಪಾಲನ್ನು ಹೊಂದಿರುವ ಜಪಾನ್ ಐದನೇ ಅತಿ ದೊಡ್ಡ ಆಮದುದಾರನಾಗಿ ಮುಂದುವರೆದಿದೆ. USD ಮೌಲ್ಯದಲ್ಲಿ 6.95 % ಬೆಳವಣಿಗೆಯನ್ನು ದಾಖಲಿಸಿದೆ. ಶೈತ್ಯೀಕರಿಸಿದ ಸೀಗಡಿಯು ಜಪಾನ್‌ಗೆ ರಫ್ತು ಮಾಡುವ ಪ್ರಮುಖ ವಸ್ತುವಾಗಿ ಮುಂದುವರೆಯಿತು ಮತ್ತು USD ಮೌಲ್ಯದಲ್ಲಿ ಇದು 74.55% ರಷ್ಟು ಪಾಲನ್ನು ಹೊಂದಿದ್ದು, 3.73% ನಷ್ಟು ಬೆಳವಣಿಗೆಯನ್ನು ಸಾಧಿಸಿದೆ.

ಮಧ್ಯಪ್ರಾಚ್ಯದ ರಫ್ತು ಕೂಡ, ಪ್ರಮಾಣದಲ್ಲಿ 20.2%, ರೂಪಾಯಿಯಲ್ಲಿ 21.27% ಮತ್ತು ಡಾಲರ್‌ನಲ್ಲಿ 20.7% ಬೆಳವಣಿಗೆಯನ್ನು ತೋರಿಸಿದೆ.